116	ಬಿ.ಆರ್.ನಟರಾಜಶೆಟ್ಟಿ	-	20-07-1962	18-08-1983	02-07-2014	02-07-2014		ಮುಂಬಡ್ತಿ
117	ಬಿ.ಮಂಜೇಶ್	-	19-07-1968	20-04-1992	02-07-2014	02-07-2014		ಮುಂಬಡ್ತಿ
118	ಸದಾನಂದ ಆಚಾರ್ಯ	-	22-07-1969	22-07-1992	02-07-2014	02-07-2014		ಮುಂಬಡ್ತಿ
119	ಬಿ.ಆರ್.ಕಲ್ಲಿನಾಥ್	ಪ.ಜಾ	20-07-1971	25-02-2005	02-07-2014	02-07-2014		ಮುಂಬಡ್ತಿ
120	ಪ್ರಮೋದ್ ವಾಸುದೇವ ಶೇಠ್	-	23-03-1965	27-07-1992	10-09-2015	10-09-2015		-
121	ಬಿ.ವಿ.ಹಿರೇಮಠ	-	20-12-1968	21-07-1997	10-09-2015	10-09-2015		-
122	ವೆಂಕಟೇಶ್ವರಪ್ಪ ಗಡ್ಡದ	-	10-07-1971	29-07-1997	10-03-2021	10-09-2015		ಮುಂಬಡ್ತಿ
123	ಪಿ.ಹನುಮಂತರೆಡ್ಡಿ	-	12-07-1967	29-07-1997	10-09-2015	10-09-2015		ಮುಂಬಡ್ತಿ
124	ಹೆಚ್ ಸುರೇಶ್	ಪ.ಜಾ	01-05-1974	15-04-2005	10-09-2015	10-09-2015		ಮುಂಬಡ್ತಿ
125	ಸಂಗಪ್ಪ ಎಸ್ ಗಾರಂಪಳ್ಳಿ	-	13-03-1968	29-07-1997	10-09-2015	10-09-2015		ಮುಂಬಡ್ತಿ
126	ಪಂಡರನಾಥ್ ಜಿ.ರೆಡ್ಡಿ	-	01-02-1967	05-08-1997	10-09-2015	10-09-2015		ಮುಂಬಡ್ತಿ
127	ಎಂ.ಮಂಜಪ್ಪ	-	20-05-1966	23-07-1997	28-04-2016	28-04-2016		ಮುಂಬಡ್ತಿ
128	ಎಚ್.ಆರ್.ಶಂಕರ್	-	01-04-1971	21-07-1997	28-04-2016	28-04-2016		ಮುಂಬಡ್ತಿ
129	ಬಿ.ಜಿ.ಗೋವಿಂದರಾಜು	-	18-07-1968	30-07-1997	28-04-2016	28-04-2016		ಮುಂಬಡ್ತಿ
130	ಬಿ.ಎಸ್.ವಾಸಂತಿ	-	17-01-1970	10-02-2005	19-04-2018	10-09-2015		ಮುಂಬಡ್ತಿ
131	ವೀಣಾ ಎಂ.ಭೋಜ್	-	11-09-1979	28-03-2005	19-04-2018	19-04-2018		ಮುಂಬಡ್ತಿ
132	ಶಿವರಾಮಯ್ಯ	-	20-07-1968	24-07-1997	19-04-2018	19-04-2018		ಮುಂಬಡ್ತಿ
133	ಆರ್.ಶೇಷ	-	15-05-1974	25-07-1997	23-07-2021	19-04-2018		ಮುಂಬಡ್ತಿ
134	ಬಿ.ಮುಧೋಳ್ಕರ್ ಚನ್ನಬಸವಣ್ಣ	-	02-04-1971	29-07-1997	19-04-2018	19-04-2018		ಮುಂಬಡ್ತಿ
135	ಬಿ.ಆರ್.ಹರ್ಷ	-	11-04-1969	23-07-1997	19-04-2018	19-04-2018		ಮುಂಬಡ್ತಿ
136	ಕೆ.ಎನ್.ನಾಗರಾಜ	-	04-01-1970	28-07-1997	19-04-2018	19-04-2018		ಮುಂಬಡ್ತಿ
137	ವೀಣಾ ಸಿ ನಿರ್ವಾಣಿ	-	31-05-1980	31-01-2011	21-11-2019	17-10-2019		ಮುಂಬಡ್ತಿ
138	ಅಸ್ಮ ಸಯದಿ	-	06-01-1979	01-02-2011	02-11-2019	17-10-2019		ಮುಂಬಡ್ತಿ
139	ರಾಕೇಶ್ ಕುಮಾರ್ ವಿ	-	08-06-1984	25-01-2011	18-10-2019	17-10-2019		ಮುಂಬಡ್ತಿ
140	ಶಿಲ್ಪ ದೇಸಾಯಿ	-	09-12-1978	25-01-2011	19-10-2019	17-10-2019		ಮುಂಬಡ್ತಿ
141	ಆಶಾ ಭರತ್	-	24-05-1979	03-02-2011	05-11-2019	17-10-2019		ಮುಂಬಡ್ತಿ
142	ಆರತಿ ವೆಂಕಟೇಶ್ ಸುನದೋಳಿ	-	20-06-1976	25-01-2011	23-10-2019	17-10-2019		ಮುಂಬಡ್ತಿ
143	ಎಂ.ಎಸ್.ಮೀನಾಕ್ಷಿ ಕುಮಾರಿ	-	18-04-1978	25-01-2011	02-07-2021	17-10-2019		ಮುಂಬಡ್ತಿ
144	ಎಂ.ಎಸ್ ಪಂಕಜ	-	17-01-1975	04-02-2011	06-12-2019	17-10-2019		ಮುಂಬಡ್ತಿ
145	ಸಾವಿತ್ರಿ ಪಾಟೀಲ್	-	25-07-1980	28-01-2011	04-05-2020	17-10-2019		ಮುಂಬಡ್ತಿ

146	ಎಂ.ಎನ್.ವೀರಯ್ಯ	-	20-03-1963	03-02-2011	02-11-2019	17-10-2019		ವಯೋನಿವೃತ್ತಿ
147	ಎಚ್.ವಿ.ಸೀಮಾ	-	14-05-1976	25-01-2011	24-10-2019	17-10-2019		ಮುಂಬಡ್ತಿ
148	ಕೆ.ಎನ್. ಧರ್ಮೇಂದ್ರ	ಪ.ಜಾ	15-05-1971	25-01-2011	07.11.2025	17-10-2019		ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 13 ನಯೋಸೇ 2023, ದಿನಾಂಕ 07.11.2025 ರಲ್ಲಿ ದಿನಾಂಕ 17.10.2019 ರಿಂದ ಅನ್ವಯವಾಗುವಂತೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಿ, ಭವಿಷ್ಯವರ್ತಿಯಾಗಿ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.
149	ಜೆ.ಮಂಜುನಾಥ್	-	10-06-1968	17-07-1997	25-10-2019	17-10-2019		ಮುಂಬಡ್ತಿ
150	ಕೆ.ಎ.ಶಾಂತರಾಜ	-	16-07-1968	28-07-1997	25-11-2019	17-10-2019		ಮುಂಬಡ್ತಿ
151	ಹೆಚ್.ನಾಗರಾಜಪ್ಪ	-	20-04-1973	19-07-1997	01-02-2020	17-10-2019		ಮುಂಬಡ್ತಿ
152	ಡಿ.ಟಿ. ನರಸಿಂಗರಾವ್	-	22-02-1966	21-07-1997	18-11-2019	17-10-2019		-
153	ಸಿ.ವಿ.ವೆಂಕಟೇಶಪ್ಪ	-	13-10-1970	24-07-1997	23-10-2019	17-10-2019		-
154	ಸಿ.ಎನ್.ರಾಘವೇಂದ್ರ	-	09-01-1972	29-07-1997	18-11-2019	17-10-2019		-
155	ಎನ್.ಟಿ. ಶಂಕರರೆಡ್ಡಿ	-	01-06-1966	21-07-1997	20-06-2022	30-05-2022		-
156	ಎಂ. ವಹೀದ್ ಅಖ್ತರ್	-	01-09-1973	29-07-1997	08-11-2022	30-05-2022		-
157	ಶಂಕರಪ್ಪ. ಎಂ	-	01-07-1968	21-07-1997	31-07-2022	30-05-2022		-
158	ಶಿವರಾಮು ಕೆ.ಪಿ	-	01-03-1966	24-07-1997	06-06-2022	30-05-2022		-
159	ಹನುಮಂತರಾಯಪ್ಪ. ಬಿ	-	20-02-1968	16-10-1999	14-06-2022	30-05-2022		-
160	ಲಸುಮಾ ನಾಯಕ್. ಸಿ	ಪ.ಜಾ	01-09-1969	18-11-2003	08-07-2022	30-05-2022		-
161	ಮೀನಾಕ್ಷಿ ಗೋಜೋತೆಣ್ಣವರ್	ಪ.ಪಂ	08-03-1966	29-10-1999	29-06-2022	30-05-2022		-
162	ಕೆ.ಬಿ.ನಿಂಗರಾಜು	-	26-07-1967	20-10-1999	01-07-2022	30-05-2022		-

163	ಮಹಜರ್ ಷರೀಫ್	-	30-07-1967	16-10-1999	21-06-2022	30-05-2022		-
164	ಎಸ್.ಜಗದೀಶ	-	01-08-1967	03-11-1999	18-05-2023	10-03-2023	30-05-2022	ದಿನಾಂಕ 11.07.2014 ರಂದು ಸ್ಥಳೀಯ ವೃಂದ ರಚನೆ ಮಾಡುವ ಮೊದಲಿಗೆ ದಿ: 08.08.2013 ರಂದು ಮೂಲ ವೃಂದದ ಜ್ಯೇಷ್ಠತಾ ಪಟ್ಟಿಯನ್ನಾಧರಿಸಿ ಮುಂಬಡ್ತಿ ನೀಡಿರುವುದನ್ನು ಪುನರ್ ಪರಿಶೀಲಿಸಿ, ಮರು ಹೊಂದಾಣಿಕೆ ಮಾಡಿದಾಗ ದಿನಾಂಕ 08.08.2013 ರಂದು ಸ್ಥಳೀಯ ವೃಂದ ರಚಿಸಿದ್ದರೆ ಈ ಅಧಿಕಾರಿಗಳಿಗೂ ಸಹ ಮುಂಬಡ್ತಿಗೆ ಅರ್ಹರಿದ್ದರೆಂಬುದನ್ನು ಪರಿಗಣಿಸಿ ಪ್ರಸ್ತಾಪಿತ ದಿನಾಂಕವನ್ನು ನಿಗಧಿಪಡಿಸಲಾಗಿದೆ.
165	ಶಿವಕುಮಾರ್ ಡಿ ಪಾಟೀಲ	-	16-06-1973	05-11-1999	17-03-2023	10-03-2023	30-05-2022	
166	ವಿಷ್ಣು ನಾರಾಯಣ ತೇರದಾಳ್	ಪ.ಜಾ	08-07-1974	30-12-2004	24-03-2023	10-03-2023	30-05-2022	-
167	ಶಿವರಾಜ ಶಂಕರ್ ಗಸ್ತಿ	ಪ.ಜಾ	26-06-1969	24-12-2004	03-08-2023	10-03-2023	30-05-2022	-
168	ವಿಜಯ ಮಹಾಂತೇಶ ಎ. ಧರ್ಮಂತಿ	-	21-01-1986	19-02-2010	10-03-2023	10-03-2023	30-05-2022	ದಿನಾಂಕ 11.07.2014 ರಂದು ಸ್ಥಳೀಯ ವೃಂದ ರಚನೆ ಮಾಡುವ ಮೊದಲಿಗೆ ದಿನಾಂಕ 08.08.2013
169	ನರೇಂದ್ರ ಕುಮಾರ್	-	21-11-1983	19-02-2010	20-03-2023	10-03-2023	30-05-2022	
170	ಆರ್.ಪ್ರಕಾಶ್	ಪ.ಜಾ	12-07-1980	17-07-2010	24-03-2023	10-03-2023	30-05-2022	
171	ಪ್ರಸನ್ನ.ಆರ್	ಪ.ಜಾ	10-06-1985	18-02-2010	19-04-2023	10-03-2023	30-05-2022	
172	ಲಲಿತಾ ನಾಯಕ್	ಪ.ಜಾ	22-07-1976	17-07-2010	20-03-2023	10-03-2023	30-05-2022	

173	ವಿದ್ಯಾ ಬೆಳಂಕರ್	ಪ.ಜಾ	30-04-1976	05-05-2010	05-04-2023	10-03-2023	30-05-2022	ರಂದು ಮೂಲ ವೃಂದದ ಜ್ಯೇಷ್ಠತಾ ಪಟ್ಟಿಯನ್ನಾ ಧರಿಸಿ ಮುಂಬಡ್ತಿ ನೀಡಿರುವುದ ನ್ನು ಪುನರ್ ಪರಿಶೀಲಿಸಿ, ಮರು ಹೊಂದಾಣಿ ಕೆ ಮಾಡಿದಾಗ ದಿನಾಂಕ 08.08.2013 ರಂದು ಸ್ಥಳೀಯ ವೃಂದ ರಚಿಸಿದ್ದರೆ ಈ ಅಧಿಕಾರಿಗಳಿ ಗೂ ಸಹ ಮುಂಬಡ್ತಿಗೆ ಅರ್ಹರಿದ್ದ ರೆಂಬುದನ್ನು ಪರಿಗಣಿಸಿ ಪುನಸ್ಥಾಪಿತ ದಿನಾಂಕವ ನ್ನು ನಿಗಧಿಪಡಿಸ ಲಾಗಿದೆ.
174	ಭಂಡಾರಿ ಹೆಚ್ ವಿಷ್ಣು	-	02-04-1964	10-11-1999	12-02-2024	10-03-2023	30-05-2022	
175	ರೂಪ.ಸಿ.ಕೆ	-	25-08-1971	25-10-1999	27-06-2022	30-05-2022	30-05-2022	ದಿನಾಂಕ 08.08.2013ಕ್ಕೆ ಉಳಿಕೆ ಮೂಲ ವೃಂದದಲ್ಲಿ ಹುದ್ದೆ ಖಾಲಿ ಇಲ್ಲದ ಕಾರಣ ದಿನಾಂಕ 28.04.2016 ರಂದು ನೀಡಲಾದ ಮುಂಬಡ್ತಿ ದಿನಾಂಕಕ್ಕೆ ಕಾಲ್ಪನಿಕ ಅರ್ಹತಾ ದಿನಾಂಕವೆಂ ದು ನಿಗಧಿಪಡಿಸ ಲಾಗಿದೆ. ಸರ್ಕಾರದ ಅಧಿಸೂಚ ನೆ ಸಂಖ್ಯೆ: ನಅಇ 288 ನಯೋಸೇ 2024(ಇ), ದಿನಾಂಕ
176	ರಂಜನಾ ಡಿ ಮುನವಳ್ಳಿ	-	15-02-1969	16-10-1999	06-07-2022	30-05-2022	30-05-2022	
177	ಮಹಾಂತೇಶ್ ಐ. ಪೂಜಾರ್	-	22-07-1978	20-10-1999	31-05-2022	30-05-2022	30-05-2022	
178	ಕೆ.ಎಸ್. ಮಹೇಶ್ವರಪ್ಪ	-	10-08-1964	20-10-1999	12-08-2022	30-05-2022	30-05-2022	

								10-10-2025 ರಲ್ಲಿ ದಿನಾಂಕ 07-12-2024 ರಿಂದ ಅನ್ವಯವಾಗುವಂತೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಿ, ಭವಿಷ್ಯವರ್ತಿಯಾಗಿ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.
179	ತಿಪ್ಪಣ್ಣ ಎಸ್. ಮಾಂಗ್	ಪ.ಜಾ	25-07-1968	11-09-2001	10-10-2025	07-12-2024	-	-
180	ಅಲ್ಲಾ ಬಕಾಶ್	-	26-03-1986	20-03-2017	-	07-12-2024	-	-
181	ಸೌಮ್ಯ ಎಂ.ಎನ್.	-	17-02-1982	23-03-2017	19-02-2025	07-12-2024	-	-
182	ಪ್ರಜ್ಞ ಪ್ರಕಾಶ್	-	10-04-1987	22-03-2017	18-02-2025	07-12-2024	-	-
183	ಅಂಜನ್ ಎಲ್. ಹಳೇಮನೆ	-	03-07-1986	23-03-2017	14-01-2025	07-12-2024	-	-
184	ಮೋಹನ್ ಎಂ.	-	06-06-1985	23-03-2017	18-12-2024	07-12-2024	-	-
185	ರವೀಶ್ ಸಿ.	-	09-11-1981	30-03-2017	12-12-2024	07-12-2024	-	-
186	ಶಿವಪ್ರಸಾದ್ ವಿ.	-	29-12-1985	20-03-2017	12-12-2024	07-12-2024	-	-
187	ವಿಶ್ವ ಎಸ್.	-	03-04-1987	18-03-2017	10-12-2024	07-12-2024	-	-
188	ವಿದ್ಯಾ ಡಿ.	-	21-12-1988	23-03-2017	18-12-2024	07-12-2024	-	-
189	ಮಹೇಶ್ ಚಂದ್ರಗೌಡ	-	02-05-1980	30-03-2017	10-12-2024	07-12-2024	-	-
190	ಧ್ರುವರಾಜ್	ಪ.ಜಾ	16-07-1987	24-03-2017	12-12-2024	07-12-2024	-	-
191	ಅಭಿಲಾಷ್ ಎಂ.ಪಿ.	ಪ.ಜಾ	02-08-1989	20-03-2017	31-01-2025	07-12-2024	-	-
192	ಜಗನ್ ಶೆಟ್ಟರ್	-	30-06-1987	24-03-2017	17-03-2025	28-02-2025	-	-

(ಲತಾ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-183

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್.
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬಿ.ಬಿ ರಸ್ತೆಯ (ಎನ್.ಹೆಚ್-44) ಹುಣಸಮಾರನಹಳ್ಳಿ ಅಂಡರ್ ಪಾಸ್ ನಿಂದ ಎಂ.ವಿ.ಐ.ಟಿ ಕ್ರಾಸ್ ವರೆಗೆ 920 ಮೀಟರ್ ಸರ್ವೀಸ್ ರಸ್ತೆಯನ್ನು ಏಕಮುಖ (One way) ಸಂಚಾರ ರಸ್ತೆಯನ್ನಾಗಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1. ಪೊಲೀಸ್ ಇನ್ಸ್‌ಪೆಕ್ಟರ್ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆ, ರವರ ಪತ್ರ ಸಂ.192/ಸಿಸಿ/ಚಿ.ಸಂ.ಪೊ.ಎಸ್/2025, ದಿ. 15.12.2025.

2. ಹುಣಸಮಾರನಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರ ಮನವಿ ಪತ್ರ,ದಿ:31.11.2025.

3. ಎಸಿಪಿ, ಸಂಚಾರ ಈಶಾನ್ಯ ಉಪ-ವಿಭಾಗ, ಬೆಂಗಳೂರು ನಗರ ರವರ ಪತ್ರ ಸಂ.ಅಧಿ/ಪ್ರ/10/ಎಸಿಪಿ/ಸಂ.ಈ.ಉ.ವಿ/2025.ದಿ.16.12.2025.

4. ಉಪ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ವಿಭಾಗ ರವರ ಕಛೇರಿ.ಸಂ/15/ಅ.ಸೂ/ಅನುಮತಿ/ಡಿಸಿಪಿ/ಸಂ.ಉ/2025,ದಿ:17.12.2025.

5. ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ, ದಿ: 22.01.2026.

ಪ್ರಸ್ತಾವನೆ,

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಈಶಾನ್ಯ ಉಪವಿಭಾಗ, ಉಪ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸದರಿ ಪ್ರಸ್ತಾವನೆಯಲ್ಲಿ, ಬೆಂಗಳೂರು ನಗರ, ಸಂಚಾರ ಉತ್ತರ ವಿಭಾಗದ, ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬಿ.ಬಿ.ರಸ್ತೆಯು (ಎನ್.ಹೆಚ್-44) ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿದ್ದು, ಸದರಿ ರಸ್ತೆಯಲ್ಲಿ ಪ್ರತಿದಿನ ಲಕ್ಷಾಂತರ ವಾಹನಗಳು ಸಂಚರಿಸುತ್ತಿದ್ದು, ವಾಹನಗಳ ದಟ್ಟಣೆ ಅಧಿಕವಾಗಿರುತ್ತದೆ. ಈ ರಸ್ತೆಗೆ ಎಂವಿಐಟಿ ಕ್ರಾಸ್ ರಸ್ತೆಯ ಮೂಲಕ ಏರ್‌ಪೋರ್ಟ್ ರಸ್ತೆಗೆ ಬರುವ ವಾಹನಗಳ ಸಂಖ್ಯೆಯೂ ಹೆಚ್ಚಾಗಿರುತ್ತದೆ. ನಾರಾಯಣಪುರ ರೈಲ್ವೆ ಕ್ರಾಸ್ ನ ರೈಲ್ವೆ ಓವರ್ ಬ್ರಿಡ್ಜ್ ಕಾಮಗಾರಿಯು ಶೀಘ್ರದಲ್ಲಿ ಮುಗಿದು ಸಾರ್ವಜನಿಕರ ಉಪಯೋಗಕ್ಕೆ ಬಂದಲ್ಲಿ ಇನ್ನೂ ಹೆಚ್ಚಿನ ಸಂಚಾರ ದಟ್ಟಣೆಯಾಗುವ ಸಾಧ್ಯತೆಯಿದ್ದು, ಇದರಿಂದ ಬೆಂಗಳೂರು ನಗರ ಮತ್ತು ಏರ್ ಪೋರ್ಟ್ ಕಡೆಗೆ ಸಂಚರಿಸುವ ವಾಹನಗಳು ಎಂ.ವಿ.ಐ.ಟಿ ಜಂಕ್ಷನ್ ನಲ್ಲಿ ಬಲ ತಿರುವು ಪಡೆದು ಸರ್ವೀಸ್ ರಸ್ತೆಯಲ್ಲಿ ಹುಣಸಮಾರನಹಳ್ಳಿ ಕಡೆಗೆ ಸಂಚರಿಸುವುದರಿಂದ, ಸರ್ವೀಸ್ ರಸ್ತೆ ಮತ್ತು ಹುಣಸಮಾರನಹಳ್ಳಿ ಅಂಡರ್

ಪಾಸ್ ಬಳಿ ಸಂಚಾರ ದಟ್ಟಣೆಯಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸದರಿ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಯನ್ನಾಗಿ ಮಾಡುವಂತೆ ಹುಣಸಮಾರನಹಳ್ಳಿ, ಸುತ್ತಮುತ್ತಲಿನ ಸಾರ್ವಜನಿಕರು ಮನವಿ ಮಾಡಿರುತ್ತಾರೆ.

ಸಾರ್ವಜನಿಕರ ಮನವಿ ಮೇರೆಗೆ, ಪೊಲೀಸ್ ಇನ್ಸ್ ಪೆಕ್ಟರ್ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆ ರವರು ಸ್ಥಳಪರಿಶೀಲನೆ ಮಾಡಲಾಗಿ, ಬಿ.ಬಿ.ರಸ್ತೆಯು (ಎನ್.ಹೆಚ್-44) ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದ್ದು, ಇದರ ಸರ್ವೀಸ್ ರಸ್ತೆಯು ದ್ವಿಮುಖ ಸಂಚಾರದ ರಸ್ತೆಯಾಗಿದ್ದು, ಪ್ರತಿದಿನ ಲಕ್ಷಾಂತರ ವಾಹನಗಳು ಸಂಚರಿಸುತ್ತಿದ್ದು, ಸಂಚಾರ ದಟ್ಟಣೆಯಾಗಿ, ಎಂ.ವಿ.ಐ.ಟಿ ಕ್ರಾಸ್ ರಸ್ತೆಯ ಮೂಲಕ ಏರ್‌ಪೋರ್ಟ್ ರಸ್ತೆಗೆ ಬರುವ ವಾಹನಗಳ ಸಂಖ್ಯೆಯು ಹೆಚ್ಚಾಗಿರುತ್ತದೆ, ಅಲ್ಲದೇ ನಾರಾಯಣಪುರ ರೈಲ್ವೆ ಕ್ರಾಸ್‌ನ ರೈಲ್ವೆ ಓವರ್ ಬ್ರಿಡ್ಜ್ ಕಾಮಗಾರಿ ಮುಗಿದು ಸಾರ್ವಜನಿಕರ ಉಪಯೋಗಕ್ಕೆ ಬಂದಲ್ಲಿ ಇನ್ನೂ ಹೆಚ್ಚಿನ ಸಂಚಾರ ದಟ್ಟಣೆಯಾಗುವ ಸಾಧ್ಯತೆಯಿರುತ್ತದೆ, ಈ ರಸ್ತೆಯಲ್ಲಿ ಬೆಂಗಳೂರು ನಗರ ಮತ್ತು ಏರ್‌ಪೋರ್ಟ್ ಕಡೆಗೆ ಸಂಚರಿಸುವ ವಾಹನಗಳು ಎಂ.ವಿ.ಐ.ಟಿ ಜಂಕ್ಷನ್ ನಲ್ಲಿ ಬಲ ತಿರುವು ಪಡೆದು ಸರ್ವೀಸ್ ರಸ್ತೆಯಲ್ಲಿ ಹುಣಸಮಾರನಹಳ್ಳಿ ಕಡೆಗೆ ಸಂಚರಿಸುವುದರಿಂದ, ಸರ್ವೀಸ್ ರಸ್ತೆ ಮತ್ತು ಹುಣಸಮಾರನಹಳ್ಳಿ ಅಂಡರ್ ಪಾಸ್ ಬಳಿ ಸಂಚಾರ ದಟ್ಟಣೆಯಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದಾಗಿ ತಿಳಿಸುತ್ತಾ.

ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ಬಿ.ಬಿ ರಸ್ತೆಯ (ಎನ್.ಹೆಚ್-44) ಹುಣಸಮಾರನಹಳ್ಳಿ ಅಂಡರ್ ಪಾಸ್ ನಿಂದ, ಎಂವಿಐಟಿ ಕ್ರಾಸ್ ವರೆಗಿನ ಸರ್ವೀಸ್ ರಸ್ತೆಯಲ್ಲಿ ಬೆಂಗಳೂರು ನಗರದ ಕಡೆಯಿಂದ ಕೆಂಪೇಗೌಡ ಏರ್ ಪೋರ್ಟ್‌ಗೆ ಸಂಚರಿಸುವ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳ ಸಂಚಾರ ನಿರ್ಬಂಧಿಸಿ, 920ಮೀಟರ್ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಯನ್ನಾಗಿ ಮಾಡುವ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ ಅಧಿಸೂಚನೆಯನ್ನು ಹೊರಡಿಸಲು ಕೋರಿ, ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ, ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-44 ರ ಹುಣಸಮಾರನಹಳ್ಳಿ ಅಂಡರ್ ಪಾಸ್ ನಿಂದ, ಎಂವಿಐಟಿ ಕ್ರಾಸ್ ವರೆಗಿನ ಸರ್ವೀಸ್ ರಸ್ತೆಯಲ್ಲಿ ಬೆಂಗಳೂರು ನಗರದ ಕಡೆಯಿಂದ ಕೆಂಪೇಗೌಡ ಏರ್ ಪೋರ್ಟ್‌ಗೆ ಸಂಚರಿಸುವ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳ ಸಂಚಾರ ನಿರ್ಬಂಧಿಸಿ, 920 ಮೀಟರ್ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಯನ್ನಾಗಿ ಮಾಡಿ, ಪರ್ಯಾಯ ಮಾರ್ಗಗಳನ್ನು ಉಪಯೋಗಿಸಲು ಸೂಚಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ:01/ಅಧಿಸೂಚನೆ/ಜಂ.ಪೊ.ಆ(ಸಂ)/2026,ದಿ:23.01.2026.

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು,** ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ, ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ, ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-44 ರ ಹುಣಸಮಾರನಹಳ್ಳಿ ಅಂಡರ್ ಪಾಸ್ ನಿಂದ, ಎಂವಿಐಟಿ ಕ್ರಾಸ್ ವರೆಗಿನ ಸರ್ವೀಸ್ ರಸ್ತೆಯಲ್ಲಿ ಬೆಂಗಳೂರು ನಗರದ ಕಡೆಯಿಂದ ಕೆಂಪೇಗೌಡ ಏರ್ ಪೋರ್ಟ್‌ಗೆ ಸಂಚರಿಸುವ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳ ಸಂಚಾರ ನಿರ್ಬಂಧಿಸಿ, 920

ಮೀಟರ್ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಯನ್ನಾಗಿ ಮಾರ್ಪಡಿಸಿ ಪರ್ಯಾಯ ಮಾರ್ಗಗಳನ್ನು ಉಪಯೋಗಿಸಲು ಸೂಚಿಸಿ, ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ಏಕಮುಖ ಸಂಚಾರ ರಸ್ತೆಯನ್ನಾಗಿ ಅಧಿಸೂಚನೆ ಹೊರಡಿಸಿರುವ ರಸ್ತೆ ವಿವರ

ಸಂಚಾರ ಠಾಣೆ: ಚಿಕ್ಕಜಾಲ			
ರಸ್ತೆಯ ಹೆಸರು	**ಇಂದ**	**ವರೆಗೆ**	**ದಿಕ್ಕು**
ಬೆಂಗಳೂರು-ಬಳ್ಳಾರಿ ರಸ್ತೆಯ ಸರ್ವೀಸ್ ರಸ್ತೆ	ಹುಣಸಮಾರನಹಳ್ಳಿ ಅಂಡರ್ ಪಾಸ್ ನಿಂದ	ಎಂವಿಐಟಿ ಕ್ರಾಸ್ ವರೆಗೆ	ದಕ್ಷಿಣ ದಿಂದ ಉತ್ತರ ಕ್ಕೆ 920 ಮೀ
ಅಕ್ಷಾಂಶ: 13.144384 **13.151924**		**ರೇಖಾಂಶ: 77.617333** **77.620075**	

ಪರ್ಯಾಯ ಮಾರ್ಗ :

- ಎಂವಿ ಐಟಿ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಸಂಚರಿಸುವ ಕಾರ್ & ದ್ವಿಚಕ್ರ ವಾಹನಗಳು ವಾಹನಗಳು, ಎಂ.ವಿ.ಐ.ಟಿ ಜಂಕ್ಷನ್ ಎಡ ತಿರುವು ಪಡೆದು ಎ 2 ಬಿ ಹೋಟೆಲ್ ಎದುರಿನ ಆಂಡರ್‌ಪಾಸ್ ಮೂಲಕ ಸಂಚರಿಸಬಹುದಾಗಿರುತ್ತದೆ. ಭಾರಿ (HGV ಮತ್ತು HTV) ಮತ್ತು ಸರಕು ಸಾಗಣೆ ವಾಹನಗಳು ವಿದ್ಯಾನಗರ ಕ್ರಾಸ್‌ನಲ್ಲಿ ಯೂ ಟರ್ನ್ ಪಡೆದುಕೊಂಡು ಸರ್ವೀಸ್ ರಸ್ತೆಯಲ್ಲಿ ಚಲಿಸಿ, ವಿವಾ ಟಯೋಟ ಷೋರೂಂ ಎದುರು ಮುಖ್ಯರಸ್ತೆಗೆ ಸೇರಿ ಬೆಂಗಳೂರು ನಗರದ ಕಡೆಗೆ ಸಂಚರಿಸಬಹುದು.
- ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚರಿಸುವ ವಾಹನಗಳು ಸರ್ವೀಸ್ ರಸ್ತೆಯಲ್ಲೇ ಚಲಿಸಿ ಚಿಕ್ಕಜಾಲ ಕೋಟೆ ಕ್ರಾಸ್ ಬಳಿ ಮುಖ್ಯರಸ್ತೆಗೆ ಸೇರಿ ಏರ್ ಪೋರ್ಟ್ ಕಡೆಗೆ ಸಂಚರಿಸಬಹುದು.

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:23.01.2026 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(ಸೀಮಾಂತ್ ಕುಮಾರ್ ಸಿಂಗ್ ಐ.ಪಿ.ಎಸ್)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

PR-184

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಡಾ||ರಾಜ್ ಕುಮಾರ್ ರಸ್ತೆಯ ನವರಂಗ್ ಸರ್ಕಲ್ ನಿಂದ ಸ್ಟಾರ್ ಬಜಾರ್ (ರಾಜಾಜಿನಗರ ಎಂಟ್ರೆನ್ಸ್) ವರೆಗೆ ವೈಟ್‌ಟಾಪಿಂಗ್ ಕಾಮಗಾರಿ ಪ್ರಯುಕ್ತ ತಾತ್ಕಾಲಿಕವಾಗಿ ಸಂಚಾರ ಮಾರ್ಪಡು ಮಾಡಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಕಛೇರಿ ನಿರಾಪೇಕ್ಷಣಾ ಪತ್ರ ಸಂ.3(92)/ಜಿಬಿಎ/ಜಂಸಿಪಿ(ಸಂ)/2025.ದಿ: 14-01-2026.

2 ಪೊಲೀಸ್ ಇನ್ಸ್‌ಪೆಕ್ಟರ್ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ ರವರ ಸಂ.09/ಸಿಸಿ/ರಾಸಂಪೊಠಾ/2026 ದಿನಾಂಕ: 16.01.2026.

3 ಎಸಿಪಿ, ಸಂಚಾರ ಉತ್ತರ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ.18/ಸಿಸಿ/ಎಸಿಪಿ/ಸಂಉಉವಿ/2025 ದಿನಾಂಕ: 17.01.2026.

4 ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಸಂ: 01/Notification/ಡಿಸಿಪಿ/ಸಂಉ/2026. ದಿ: 20.01.2026.

5 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ ದಿ: 28.01.2026.

ಪ್ರಸ್ತಾವನೆ,

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಡಾ||ರಾಜ್ ಕುಮಾರ್ ರಸ್ತೆಯ ಸ್ಟಾರ್ ಬಜಾರ್ (ರಾಜಾಜಿನಗರ ಎಂಟ್ರೆನ್ಸ್) ನಿಂದ ನವರಂಗ್ ಥಿಯೇಟರ್ ಜಂಕ್ಷನ್ ವರೆಗೆ ಸುಮಾರು 2 ಕಿ.ಮೀ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲು, ಉಪ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ವಿಭಾಗ ಬೆಂಗಳೂರು ನಗರ ರವರ ಅಭಿಪ್ರಾಯ ವರದಿ ಮೇರೆಗೆ ಉಲ್ಲೇಖಿತ-1 ರ ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಕಛೇರಿ ಪತ್ರ ಸಂ.3(92)/ಜಿಬಿಎ/ಜಂಸಿಪಿ (ಸಂ)/2025 ದಿ: 14-01-2026.ರಲ್ಲಿ ಸೂಕ್ತ ನಿಬಂಧನೆಗೊಳಪಟ್ಟು ಕಾಮಗಾರಿ ಕೈಗೊಳ್ಳಲು ನಿರಾಪೇಕ್ಷಣಾ ಪತ್ರ ನೀಡಲಾಗಿರುತ್ತದೆ.

ಉಪ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ವಿಭಾಗ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ ರವರು, ಠಾಣಾ ವ್ಯಾಪ್ತಿಯ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳುವ ಡಾ||ರಾಜ್ ಕುಮಾರ್ ರಸ್ತೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ರಸ್ತೆಯು ನವರಂಗ್ ಸರ್ಕಲ್ ನಿಂದ ಸ್ಟಾರ್ ಬಜಾರ್ (ರಾಜಾಜಿನಗರ ಎಂಟ್ರೆನ್ಸ್) ವರೆಗೆ ದ್ವಿಮುಖ ಸಂಚಾರದ ರಸ್ತೆಯಾಗಿದ್ದು, ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಿಂದ ಈ ರಸ್ತೆಯ ಮೂಲಕ ಮೆಜಸ್ಟಿಕ್ ಗೆ

ಹಾಗೂ ಇತರೆ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಾಗಿರುತ್ತದೆ. ಈ ರಸ್ತೆಯಲ್ಲಿ ಕೆ.ಎಸ್.ಆರ್.ಟಿ.ಸಿ/ಬಿ.ಎಂ.ಟಿ.ಸಿ ಬಸ್ಸುಗಳು ಪ್ರತಿ ದಿನ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಣೆಯಾಗುತ್ತಿರುತ್ತವೆ, ವೈಟ್‌ಟಾಪಿಂಗ್ ಕಾಮಗಾರಿ ನಡೆಸುವ ಸಮಯದಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ಡಾ||ರಾಜ್ ಕುಮಾರ್ ರಸ್ತೆಯ ನವರಂಗ್ ಸರ್ಕಲ್ ನಿಂದ ಸ್ಟಾರ್ ಬಜಾರ್ (ರಾಜಾಜಿನಗರ ಎಂಟೈನ್ಸ್) ವರೆಗಿನ ಸುಮಾರು 2 ಕೀ.ಮೀ ರಸ್ತೆಯಲ್ಲಿ ಮಾನ್ಯರು ಅನುಮತಿಸಿದ ದಿನಾಂಕದಿಂದ, ದಿನಾಂಕ: 30.06.2026 ರ ವರೆಗೆ ತಾತ್ಕಾಲಿಕವಾಗಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿಗೆ ಅವಕಾಶ ಕಲ್ಪಿಸಿ, ಸಂಚಾರ ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ ಅಧಿಸೂಚನೆ ಹೊರಡಿಸಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಡಾ||ರಾಜ್ ಕುಮಾರ್ ರಸ್ತೆಯ ನವರಂಗ್ ಸರ್ಕಲ್ ನಿಂದ ಸ್ಟಾರ್ ಬಜಾರ್ (ರಾಜಾಜಿನಗರ ಎಂಟೈನ್ಸ್) ವರೆಗಿನ ಸುಮಾರು 2 ಕೀ.ಮೀ ರಸ್ತೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರ ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಅವಕಾಶ ಕಲ್ಪಿಸಿ, ಮಾನ್ಯರು ಅನುಮತಿಸಿದ ದಿನದಿಂದ ದಿನಾಂಕ: 30.06.2026ರ ವರೆಗೆ ತಾತ್ಕಾಲಿಕವಾಗಿ ಸಂಚಾರ ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ:02/ಅಧಿಸೂಚನೆ/ಜಂ.ಪೊ.ಆ (ಸಂ)/2026, ದಿ:30.01.2026.

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ** ಆದನಾನು**,** ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಡಾ||ರಾಜ್ ಕುಮಾರ್ ರಸ್ತೆಯ ನವರಂಗ್ ಸರ್ಕಲ್ ನಿಂದ ಸ್ಟಾರ್ ಬಜಾರ್ (ರಾಜಾಜಿನಗರ ಎಂಟೈನ್ಸ್) ವರೆಗಿನ ಸುಮಾರು 2 ಕೀ.ಮೀ ರಸ್ತೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರ ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಅವಕಾಶ ಕಲ್ಪಿಸಿ, ದಿನಾಂಕ: 30.06.2026ರ ವರೆಗೆ ತಾತ್ಕಾಲಿಕವಾಗಿ ಸಂಚಾರ ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ, ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ತಾತ್ಕಾಲಿಕವಾಗಿ ಸಂಚಾರ ಮಾರ್ಪಾಡು ಮಾಡಿರುವ ರಸ್ತೆ ವಿವರ.

ಸಂಚಾರ ಠಾಣೆ:ರಾಜಾಜಿನಗರ			
ರಸ್ತೆ	ಇಂದ	ವರೆಗೆ	ದಿಕ್ಕು
ಡಾ||ರಾಜ್ ಕುಮಾರ್ ರಸ್ತೆ.	ನವರಂಗ್ ಸರ್ಕಲ್ ನಿಂದ.	ಸ್ಟಾರ್ ಬಜಾರ್ (ರಾಜಾಜಿನಗರ ಎಂಟೈನ್ಸ್) ವರೆಗೆ.	ದಕ್ಷಿಣದಿಂದ ಉತ್ತರದ ಕಡೆಗೆ.
ಅಕ್ಷಾಂಶ: 12.9981594 . 12.984677		ರೇಖಾಂಶ: 77.5504713 . 77.5550347	

ಪರ್ಯಾಯ ಮಾರ್ಗ:

- ಡಾ.ರಾಜ್ ಕುಮಾರ್ ರಸ್ತೆಯಲ್ಲಿ ತುಮಕೂರು ರಸ್ತೆಯಿಂದ ಬರುವ ವಾಹನಗಳು ಮೈಸೂರ್ ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಜಂಕ್ಷನ್ ನಲ್ಲಿ ಬಲತಿರುವು ವೆಸ್ಟ್ ಆಫ್ ಕಾರ್ಡ್ ರಸ್ತೆ ಮೂಲಕ ಧೋಬಿ ಘಾಟ್ ಎಡ ತಿರುವು ವಾಟಾಳ್ ನಾಗರಾಜ್ ರಸ್ತೆ ಮೂಲಕ ಮೆಜಸ್ಟಿಕ್ ತಲುಪಬಹುದು.

- ಮೆಜಸ್ಟಿಕ್ ನಿಂದ ಬರುವ ವಾಹನಗಳು ಡಾ.ರಾಜ್ ಕುಮಾರ್ ರಸ್ತೆಯಲ್ಲಿಯೇ ಸಂಚರಿಸಬಹುದು.

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:30.01.2026 ರಿಂದ ದಿನಾಂಕ:30.06.2026 ರ ವರೆಗೆ ತಾತ್ಕಾಲಿಕವಾಗಿ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(**ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್**)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-185

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಡಾ.ರಾಜ್ ಕುಮಾರ್ ರಸ್ತೆಯ 10ನೇ ಕ್ರಾಸ್ ನಿಂದ ನವರಂಗ್ ಜಂಕ್ಷನ್ ವರೆಗೆ ಸುಮಾರು 750 ಮೀಟರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಯುಕ್ತ ತಾತ್ಕಾಲಿಕವಾಗಿ ಸಂಚಾರ ಮಾರ್ಪಡು ಮಾಡಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಪೊಲೀಸ್ ಇನ್ಸ್ ಪೆಕ್ಟರ್ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆ ರವರ ಪತ್ರ ಸಂ:11/ಸಿಸಿ/ಮ.ಸಂ.ಪೊ.ಠಾ/2026.ದಿನಾಂಕ:19.01.2026.

2 ಕಾರ್ಯಪಾಲಕ ಅಭಿಯಂತರರು-11ರವರ ವಿಭಾಗ,ಬಿಬಿಎಂಪಿ DWCCಹತ್ತಿರ ರಾಜರಾಜೇಶ್ವರಿ ನಗರ,ಬೆಂಗಳೂರು-98 ರವರ ಪತ್ರ ದಿನಾಂಕ:30.12.2025.

3 ಎಸಿಪಿ ಸಂಚಾರ ಉತ್ತರ ಉಪ ವಿಭಾಗ ರವರ ಪತ್ರ ಸಂ:19.ಸಿಸಿ/ಎಸಿಪಿ/ಸಂಉಉವಿ/2026.ದಿನಾಂಕ:19.01.2026

4 ಉಪ ಪೊಲೀಸ್ ಆಯುಕ್ತರು,ಸಂಚಾರ ಉತ್ತರ ವಿಭಾಗ ಬೆಂಗಳೂರು ನಗರ ರವರ ಪತ್ರ ಸಂ:03/WT/ಅನುಮತಿ/ಡಿಸಿಪಿ/ಸಂ.ಉ/2026

5 ಜಂಟಿ ಪೊಲೀಸ್ ಆಯುಕ್ತರು ಸಂಚಾರ,ಬೆಂಗಳೂರು ನಗರ ರವರ ಷರಾ ದಿನಾಂಕ: 30.01.2026

ಪ್ರಸ್ತಾವನೆ,

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಡಾ.ರಾಜ್ ಕುಮಾರ್ ರಸ್ತೆಯ 10ನೇ ಕ್ರಾಸ್ ನಿಂದ ನವರಂಗ್ ಜಂಕ್ಷನ್ ವರೆಗೆ ಸುಮಾರು 750 ಮೀಟರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ವತಿಯಿಂದ ಅಪ್ಪಾಜಿ ಬಿಲ್ಡರ್ಸ್ ರವರಿಗೆ ಕಾರ್ಯಾದೇಶವಾಗಿರುವುದಾಗಿ ಸದರಿಯವರು ಕಾಮಗಾರಿ ಕೈಗೊಳ್ಳುವ ಪ್ರಯುಕ್ತ ಕೆಲವೊಂದು ಸಂಚಾರ ಮಾರ್ಪಾಡು ಮಾಡಿಕೊಡುವಂತೆ ಉಲ್ಲೇಖಿತ-2ರ ಪತ್ರದಲ್ಲಿ ಮನವಿ ಮಾಡಿರುತ್ತಾರೆ.

ಸದರಿಯವರ ಮನವಿ ಮೇರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣೆ ರವರು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ವತಿಯಿಂದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳುವ ಡಾ.ರಾಜ್ ಕುಮಾರ್ ರಸ್ತೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ರಸ್ತೆಯು ದ್ವಿಮುಖ ಸಂಚಾರದ ರಸ್ತೆಯಾಗಿದ್ದು, ಈ ರಸ್ತೆಯೂ ವಿವಿಧ ರಾಜ್ಯಗಳಿಗೆ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಸಮಯದಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಬದಲೀ ಮಾರ್ಗ ಕಲ್ಪಿಸಬೇಕಾದ ಅವಶ್ಯಕತೆರುವುದಾಗಿ ತಿಳಿಸುತ್ತಾ, ಡಾ.ರಾಜ್ ಕುಮಾರ್ ರಸ್ತೆಯ 10ನೇ ಕ್ರಾಸ್ ನಿಂದ ನವರಂಗ್ ಜಂಕ್ಷನ್ ವರೆಗೆ ಸುಮಾರು 750 ಮೀಟರ್ ರಸ್ತೆಯಲ್ಲಿ ಕಾಮಗಾರಿ ಪ್ರಾರಂಭದ ದಿನದಿಂದ ಮುಕ್ತಾಯದ ದಿನಾಂಕ:19.04.2026 ರವರೆಗೆ ತಾತ್ಕಾಲಿಕವಾಗಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿಗೆ ಅವಕಾಶ ಕಲ್ಪಿಸಿ, ಸಂಚಾರ ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ ಅಧಿಸೂಚನೆ ಹೊರಡಿಸಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಡಾ.ರಾಜ್ ಕುಮಾರ್ ರಸ್ತೆಯ 10ನೇ ಕ್ರಾಸ್ ನಿಂದ ನವರಂಗ್ ಜಂಕ್ಷನ್ ವರೆಗೆ ಸುಮಾರು 750 ಮೀಟರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭದ ದಿನದಿಂದ ಮುಕ್ತಾಯದ ದಿನಾಂಕ:19.04.2026 ರವರೆಗೆ ತಾತ್ಕಾಲಿಕವಾಗಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿಗೆ ಅವಕಾಶ ಕಲ್ಪಿಸಿ, ಸಂಚಾರ

ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ:03/ಅಧಿಸೂಚನೆ/ಜಂ.ಪೊ.ಆ (ಸಂ)/2026, ದಿ:31.01.2026

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದನಾನು, ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ಮಲ್ಲೇಶ್ವರಂ ಸಂಚಾರ ಪೊಲೀಸ್ ಠಾಣಾ ಸರಹದ್ದಿನ, ಡಾ.ರಾಜ್ ಕುಮಾರ್ ರಸ್ತೆಯ 10ನೇ ಕ್ರಾಸ್ ನಿಂದ ನವರಂಗ್ ಜಂಕ್ಷನ್ ವರೆಗೆ ಸುಮಾರು 750 ಮೀಟರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭದ ದಿನದಿಂದ ಮುಕ್ತಾಯದ ದಿನಾಂಕ:19.04.2026 ರವರೆಗೆ ತಾತ್ಕಾಲಿಕವಾಗಿ ಅಗತ್ಯಕ್ಕೆ ಅನುಗುಣವಾಗಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ, ವೈಟ್ ಟಾಪಿಂಗ್ ಕಾಮಗಾರಿಗೆ ಅವಕಾಶ ಕಲ್ಪಿಸಿ, ಸಂಚಾರ ಮಾರ್ಪಾಡು ಮಾಡಿ, ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ತಾತ್ಕಾಲಿಕವಾಗಿ ಸಂಚಾರ ಮಾರ್ಪಾಡು ಮಾಡಿರುವ ರಸ್ತೆ ವಿವರ.

ಸಂಚಾರ ಠಾಣೆ:ಮಲ್ಲೇಶ್ವರಂ			
ರಸ್ತೆ	**ಇಂದ**	**ವರೆಗೆ**	**ದಿಕ್ಕು**
ಡಾ||ರಾಜ್ ಕುಮಾರ್ ರಸ್ತೆ	ನವರಂಗ್ ಜಂಕ್ಷನ್ ನಿಂದ	10ನೇ ಕ್ರಾಸ್ ವರೆಗೆ	ದಕ್ಷಿಣದಿಂದ ಉತ್ತರದ ಕಡೆಗೆ,(750 ಮೀಟರ್)
ಅಕ್ಷಾಂಶ: 12.998318 . 13.004376		ರೇಖಾಂಶ: 77.553077 . 77.553711	

ಪರ್ಯಾಯ ಮಾರ್ಗ :

1. ತುಮಕೂರು ರಸ್ತೆಯಿಂದ ಮೆಜೆಸ್ಟಿಕ್ ಕಡೆಗೆ ಸಂಚರಿಸುವ ದ್ವಿಚಕ್ರ ಮತ್ತು ಲಘು ವಾಹನಗಳು

- ಜಿ.ಎಸ್.ಎಂ ಸರ್ಕಲ್ ಬಳಿ ಬಲ ತಿರುವು ಪಡೆದು ವೆಸ್ಟ್ ಆಫ್ ಕಾರ್ಡ್ ರಸ್ತೆ ಮೂಲಕ ಚಲಿಸಿ, ದೋಬಿ ಘಾಟ್ ಬಳಿ ಎಡ ತಿರುವು ಪಡೆದು ವಾಟಾಳ್ ನಾಗರಾಜ್ ರಸ್ತೆ ಮೂಲಕ ಮೆಜೆಸ್ಟಿಕ್ ತಲುಪುವುದು.

2. ತುಮಕೂರು ರಸ್ತೆಯಿಂದ ಮೆಜಸ್ಟಿಕ್ ಸಂಚರಿಸುವ ಕೆ.ಎಸ್.ಆರ್.ಟಿ.ಸಿ ಮತ್ತು ಪ್ರೈವೇಟ್ ಬಸ್ಸುಗಳು

- ಮಾರಪ್ಪನ ಪಾಳ್ಯದಲ್ಲಿ ಎಡ ತಿರುವು ಪಡೆದು ಯಶವಂತಪುರ ಫ್ಲೈಓವರ್ ಮಾರಮ್ಮ ವೃತ್ತ ಬಲ ತಿರುವು ಮಾಗೋರ್ಡಸಾ ರಸ್ತೆ ಕೆ.ಸಿ.ಜನರಲ್ ಜಂಕ್ಷನ್ ಗೀತಾಂಜಲಿ ಸಿಗ್ನಲ್ ಲಿಂಕ್ ರಸ್ತೆ ಮೂಲಕ ಮೆಜಸ್ಟಿಕ್ ತಲುಪಬಹುದು.

ಅಥವಾ

- ಸ್ಯಾಂಡಲ್ ಸೋಪ್ ಫ್ಯಾಕ್ಟರಿ ವೃತ್ತ ಬಳಿ ಬಲ ತಿರುವು ಪಡೆದು ವೆಸ್ಟ್ ಆಫ್ ಕಾರ್ಡ್ ರಸ್ತೆ, ದೋಭಿ ಘಟ್ ಎಡ ತಿರುವು ವಾಟಾಳ್ ನಾಗರಾಜ್ ರಸ್ತೆ ಮೂಲಕ ಮೆಜಸ್ಟಿಕ್ ತಲುಪಬಹುದು.

3. ಮೆಜಸ್ಟಿಕ್ ನಿಂದ ತುಮಕೂರು ರಸ್ತೆಗೆ ಸಂಚರಿಸುವ ವಾಹನಗಳು ಡಾ.ರಾಜ್ ಕುಮಾರ್ ರಸ್ತೆಯಲ್ಲಿಯೇ ಸಂಚರಿಸಬಹುದಾಗಿರುತ್ತದೆ.

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:31.01.2026 ರಿಂದ ದಿನಾಂಕ:19.04.2026 ರ ವರೆಗೆ ತಾತ್ಕಾಲಿಕವಾಗಿ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-186

ವೇಮಗಲ್-ನರಸಾಪುರ ಯೋಜನಾ ಪ್ರಾಧಿಕಾರ

ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ್ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್-563157, ಕೋಲಾರ ತಾಲ್ಲೂಕು
ಇ-ಮೇಲ್ - vemagalnarasapura@gmail.com

ಸಂ: ಸಂಖ್ಯೆ: ವೇ-ನ.ಯೋ.ಪ್ರಾ/ಮ.ಯೋ.ತ/2025-26 ದಿನಾಂಕ: 29-01-2026

"ಸಾರ್ವಜನಿಕ ಪ್ರಕಟಣೆ"
ನಮೂನೆ-VI
(ನಿಯಮ 32-(A))

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 10(1) ರ ಅವಕಾಶದಂತೆ ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಕೆಯ ಉದ್ದೇಶ ವ್ಯಕ್ತಪಡಿಸುವ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 221 ಬೆಂರೂಪ್ರಾ 2023 (ಇ) ದಿನಾಂಕ: 29.05.2025. ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 4-ಎ ರಡಿಯಲ್ಲಿ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಮತ್ತು ನರಸಾಪುರ ಸುತ್ತಮುತ್ತಲಿನ 112 ಗ್ರಾಮಗಳನ್ನು ಒಳಗೊಂಡಂತೆ "ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶ"ವೆಂದು ಘೋಷಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 10(1) ರನ್ವಯ ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಸಲು ಉದ್ದೇಶಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಗರ ಪ್ರಾಧಿಕಾರಗಳ ಯೋಜನಾ ನಿಯಮಗಳು 1965 ರ ನಿಯಮ 32(ಎ) ರನ್ವಯ ಸಾರ್ವಜನಿಕರಿಂದ ಸಲಹೆಗಳನ್ನು ಸದಸ್ಯ ಕಾರ್ಯದರ್ಶಿ, ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ, ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ್ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್ ಇವರ ಕಛೇರಿಗೆ ಖುದ್ದಾಗಿಯಾಗಲೀ ಅಥವಾ ನೊಂದಾಯಿತ ಅಂಚೆಯ ಮೂಲಕವಾಗಲೀ ಸಲ್ಲಿಸತಕ್ಕದ್ದು, ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಸಾರ್ವಜನಿಕರು ತಮ್ಮ ಸಲಹೆಗಳನ್ನು ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮೂಲಕ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ.

ಸಹಿ/-
ಸದಸ್ಯ ಕಾರ್ಯದರ್ಶಿ
ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ
ವೇಮಗಲ್

ಸಹಿ/-
ಅಧ್ಯಕ್ಷರು,
ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ
ವೇಮಗಲ್

PD-10

ಕರ್ನಾಟಕ ಸರ್ಕಾರ

ಸಂಖ್ಯೆ: ಒಇ 37 ಪಿಪಿಇ 2026(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ. ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30/01/2026.

ಅಧಿಸೂಚನೆ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 2023ರ ಕಲಂ: 18ರ ಉಪ ಕಲಂ (8) [ಹಿಂದಿನ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ: 24ರ ಉಪ ಕಲಂ (8)] ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಮಾನ್ಯ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ಎಫ್.ಟಿ.ಎಸ್.ಸಿ-5), ಬೆಂಗಳೂರು ನಗರ ಇಲ್ಲಿ ಬಾಕಿ ಇರುವ ಸ್ಪೇಷಲ್.ಸಿ.ನಂ: 947/2025 (ಹೆಚ್.ಎ.ಎಲ್ ಪೊಲೀಸ್ ಠಾಣೆ ಕ್ರೈಂ.ನಂ: 096/2025)ರ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಶ್ರೀ ದೀಪಕ್ ಭಾಸ್ಕರ್, ವಕೀಲರು, ಬೆಂಗಳೂರು ಇವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದಿನ ಆದೇಶದವರೆಗೆ ನೇಮಿಸಿದೆ.

ವಿಶೇಷ ಸರ್ಕಾರಿ ಅಭಿಯೋಜಕರ ಸಂಭಾವನೆ/ವೆಚ್ಚವನ್ನು ಅರ್ಜಿದಾರರಾದ ಶ್ರೀಮತಿ ಶಿಪ್ರಾ ರಾಣಿ ದಾಸ್, ನೆಲ ಮಹಡಿ, ಹ್ಯಾಂಪ್‌ಟನ್ ಕೋರ್ಟ್, ರಸಗಂಗಾ ಹೋಟೆಲ್ ಹಿಂಭಾಗ, ಬೆಳಂದೂರು, ಬೆಂಗಳೂರು ಇವರು ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(**ಜಿ. ಶ್ಯಾಮ ಹೊಳ್ಳ**)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

PR-187

GOVERNMENT OF KARNATAKA

NO: E-RD 09 GRC 2026

Karnataka Government Secretariat,
M. S. Building
Bengaluru, Dated: 03.02.2026

NOTIFICATION

Whereas, upon considering the report of the Superintendent of Police, CT&R Division and Nodal Officer CID Bengaluru and after due investigation of the complaints of depositors it has come to the notice of the Government, that Siri Vaibhava Souharda Pattina Sahakari Niyamita, is involved in fraudulent transactions by clandestinely and illegally collecting deposits or money from the general public and thereafter have failed to return the same either after maturity or on demand made by the depositors or complainants with promised interest and other assured benefits and thereby have failed to render the services promised to them.

And whereas, it has further come to the notice of the Government that Siri Vaibhava Souharda Pattina Sahakari Niyamita and people associating with them have been acquiring lands, movable and immovable properties, cash and others from and out of the deposits or money so collected, from the depositors or complainants and thereby deviating from the intended purposes of accepting the deposits or money.

And whereas, the Government has reason to believe that the actions of Siri Vaibhava Souharda Pattina Sahakari Niyamita, Bengaluru and people associating with them are acting in and detrimental to the interest of the depositors or complainants whose intention was to defraud the innocent depositors, and it has become necessary to protect the interest of the depositors of the Siri Vaibhava Souharda Pattina Sahakari Niyamita.

And whereas, now the Government after considering the reports of the Special Officer and Competent Authority IMA and other KPID Cases and Competent Authority for Siri Vaibhava Souharda Pattina Sahakari Niyamita and satisfying itself about the urgent need to protect the interest of the depositors and in exercise of the powers conferred by sub-section (2) of Section (3) of the Karnataka Protection of interest of Depositors in Financial Establishment Act, 2004 (Karnataka Act 30 of 2005) hereby makes the following order, namely:

"ORDER"

Now therefore, in exercise of the powers conferred by sub-section (2) of Section (3) of the Karnataka Protection of interest of Depositors in Financial Establishment Act, 2004 (Karnataka Act 30 of 2005), the Government under the circumstances stated above having satisfied that in order to protect the interest of depositors it is necessary to attach the movable and immovable properties believed to belong to Siri Vaibhava Souharda Pattina Sahakari Niyamita.

Therefore, the Government hereby attaches the immovable and movable properties as specified in the Annexure 1 and 2 to this order believed to have been acquired by the Siri Vaibhava Souharda Pattina Sahakari Niyamita, either in its own name or in the name of any other person from and out of the deposits collected by the Siri Vaibhava Souharda Pattina Sahakari Niyamita, and where it transpires that such money or such other properties of the said financial establishment, or the personal assets of the promoters, partners, directors, managers or members or any other person of the said financial establishment is not sufficient for the repayment of the deposits or interest or such other assured benefits to the depositors.

Note: All the aforesaid immovable and movable properties from the date of publication of this order in the Official Gazette, shall forth with vest with the Competent Authority, who has been appointed by the Government, pending further orders from the Special Court.

By Order and in the name of the
Governor of Karnataka

(Anwar Basha)
Deputy Secretary to Government,
Revenue Department
(Services-1, SSLR & Special Cell)

Annexure-1

Details of the immovable properties belonging to President/CEO of Siri Vaibhava Souharda Pattina Sahakari Niyamita, Bengaluru

Sl. No.	Schedule Property details.	Seller	Purchaser	Registration No. and date	Market Value	Remarks
1	All that piece and parcel of the Immovable property bearing BBMP Khatha No. 214/1/39/1/215/214, situated at Yelachenahalli Village, Uttarahalli Hobli, Bangalore South Taluk, measuring East to West 100 feet and North to South 59 feet, in all 5900 sq.ft., with built up area of 4400 sq.ft., in the Ground floor, built with RCC roof and vitrified tiles flooring and the property is bounded on: **East :** Property belonging to Nayar **West :** Property belonging to Mr.Narasimaiah and Mr.Bhawarlal **North :** Property belonging to purchaser and 15ft passage leading to the road to Smt. Leelamma **South :** Property belonging to B J R Rajkumar	Dr. B.J.R Shiva Shankaran & Smt. Girija S Shankar	Sri Rajesh V.R & Smt Nagavalli B.S	BSK-1-16512-2018-19, 20-03-2019	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment.
2	All that piece and parcel of the Immovable property bearing BBMP Khatha No. 213/39/2/214/213, situated at Yelachenahalli Village, Uttarahalli Hobli, Bangalore South Taluk, measuring East to West 100 feet and North to South 95 feet, in all 9500 sq.ft., with built up area of 4400 sq.ft., comprising of 2200 sq.ft., in the Ground floor and 2200 sq.ft., in the first floor built with RCC roof and vitrified tiles flooring and the property is bounded on: **East :** Property belonging to Nayar **West :** Property belonging to Mr. B.J.R Rajkumar and Mr. Narasimaiah **North :** Property belonging to Mr. B.J.R Rajkumar and Mr. Narasimaiah, property belonging to Smt. Leelamma and 15 ft passage leading to road **South :** Property belonging to Vendors	BJR Shiva Shankaran	Rajesh V R & Nagavalli	BSK-1-05840-2018-19, 08-08-2018	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment.

3	**ITEM NO: 0**All that piece and parcel of the residential immovable property bearing Site No. 6, Old Khatha No. 306, New BBMP Khatha No. 433/403/304/6 & 7, formed in Converted Sy.No. 60/6 and 60/11 (duly converted for non-agricultural residential/Industrial purposes, as per Official Memorandum bearing No. ALN.SR.32/78-79, dated: 21-08-1979, issued by the Tahasildar, Bengaluru South Taluk), situated at Bommanahalli Village, Begur Hobli, Bengaluru South Taluk, now comes within the limits of Bruhat Bengaluru Mahanagara Palike, Ward No.175, Bengaluru and measuring East to West : 40-0 feet, North to South on Eastern side: 80-0 feet, on Western Side: 78-0 feet, totaly measuring 3160 Square feet and bounded on : **East :** Site No. 7 **West :** Site No. 5 **North :** Private Property **South :** 30 feet Wide road **ITEM NO: 02** All that piece and parcel of the residential immovable property bearing Site No. 7, Old Khatha No. 306, New BBMP Khatha No. 433/403/304/6 & 7, formed in Converted Sy.No. 60/6 and 60/11 (duly converted for non-agricultural residential/Industrial purposes, as per Official Memorandum bearing No. ALN.SR.32/78-79, dated: 21-08-1979, issued by the Tahasildar, Bengaluru South Taluk), situated at Bommanahalli Village, Begur Hobli, Bengaluru South Taluk, now comes within the limits of Bruhat Bengaluru Mahanagara Palike, Ward No.175, Bengaluru and measuring East to West : 40-0 feet, North to South on Eastern side: 83-0 feet, on Western Side: 80-0 feet, totaly measuring 3260 Square feet and bounded on : **East :** Site No. 8 **West :** Site No. 6 **North :** Private Property **South :** 30 feet Wide road ***Including 24 Flats constructed in the above mentioned properties, details as follows;** **Ground Floor : Flat No's : 101, 102, 103, 104, 105** **1st Floor: Flat No's : 201, 202, 203, 204, 205** **2nd Floor: Flat No's : 301, 302, 303, 304, 305** **3rd Floor: Flat No's : 401, 402, 403, 404, 405** **4th Floor: Flat No's : 501, 502, 503, 504**	K V Sathyaprakash	Rajesh V R & Nagavalli	JPN-1-08328-2016-17, 10-02-2017	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment

No.E-RD 09 GRC 2026

(Anwar Basha)
Deputy Secretary to Government
Revenue Department
(Services-1, SSLR & Special Cell)

Annexure-2

Details of Vehicle in the name of Siri Vaibhava Gold Palace and V.R Rajesh, CEO of Sirivaibhava Pattina Sahakara Niyamitha.

Sl.No	Registration number	Vehicle model	Type of Vehicle	Date of registration	Name of the owner	Chassis Number	Engine Number	Remarks
1	KA-05-NB-5468	KIACARNIVAL D2.28AT PRESTIGE 7	7 seater	01-01-2021	Sirivaibhava Gold Palace	MZBMC81AMLN000522	D4HBKH671944	Vehicle is in the name of Financial Establishment
2	KA-05-MM-8272	TOYOTA INNOVA 2.5 V (E4) BS4	8 seater	23-03-2013	V R Rajesh	MBJ11JV40073992760313	2KDU263295	Vehicle is in the name of CEO of the Financial Establishment

No.E-RD 09 GRC 2026

(Anwar Basha)
Deputy Secretary to Government
Revenue Department
(Services-1, SSLR & Special Cell)

ಕರ್ನಾಟಕ ಸರ್ಕಾರ

ಸಂಖ್ಯೆ: ಇ-ಆರ್‌ಡಿ 09 ಜಿಆರ್‌ಸಿ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03.02.2026

ಅಧಿಸೂಚನೆ

ಪೊಲೀಸ್ ಅಧೀಕ್ಷಕರು, ಸಿ.ಟಿ ಆಂಡ್ ಆರ್ ವಿಭಾಗ ಮತ್ತು ನೋಡಲ್ ಅಧಿಕಾರಿ, ಸಿ.ಐ.ಡಿ, ಬೆಂಗಳೂರು ಇವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಇವರು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುವನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯ ವಾಗಿರುತ್ತದೆ.

ಆದ್ದರಿಂದ, ಸರ್ಕಾರವು ವಿಶೇಷಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಇವರ ವರದಿಗಳನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿ ಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004(2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"**ಆದೇಶ**"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿ ವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿಗಳನ್ನು ಹಾಗೂ ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಸಿರಿ ವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧ 1, ಮತ್ತು 2 ರಲ್ಲಿ ನಿರ್ದಿಷ್ಟ ಪಡಿಸಲಾದಂತೆ ಸ್ಥಿರಾ ಮತ್ತು ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರಾ ಮತ್ತು ಚರಾಸ್ತಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ
(ಸೇವೆಗಳು-1, ಭೂಮಾಪನ & ವಿಶೇಷ ಕೋಶ)

ಅನುಬಂಧ-1

Details of the immovable properties belonging to President/CEO of Siri Vaibhava Souharda Pattina Sahakari Niyamita, Bengaluru

Sl. No.	Schedule Property details.	Seller	Purchaser	Registration No. and date	Market Value	Remarks
1	All that piece and parcel of the Immovable property bearing BBMP Khatha No. 214/1/39/1/215/214, situated at Yelachenahalli Village, Uttarahalli Hobli, Bangalore South Taluk, measuring East to West 100 feet and North to South 59 feet, in all 5900 sq.ft., with built up area of 4400 sq.ft., in the Ground floor, built with RCC roof and vitrified tiles flooring and the property is bounded on: **East :** Property belonging to Nayar **West :** Property belonging to Mr.Narasimaiah and Mr.Bhawarlal **North :** Property belonging to purchaser and 15ft passage leading to the road to Smt. Leelamma **South :** Property belonging to B J R Rajkumar	Dr. B.J.R Shiva Shankaran & Smt. Girija S Shankar	Sri Rajesh V.R & Smt Nagavalli B.S	BSK-1-16512-2018-19, 20-03-2019	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment.
2	All that piece and parcel of the Immovable property bearing BBMP Khatha No. 213/39/2/214/213, situated at Yelachenahalli Village, Uttarahalli Hobli, Bangalore South Taluk, measuring East to West 100 feet and North to South 95 feet, in all 9500 sq.ft., with built up area of 4400 sq.ft., comprising of 2200 sq.ft., in the Ground floor and 2200 sq.ft., in the first floor built with RCC roof and vitrified tiles flooring and the property is bounded on: **East :** Property belonging to Nayar **West :** Property belonging to Mr. B.J.R Rajkumar and Mr. Narasimaiah **North :** Property belonging to Mr. B.J.R Rajkumar and Mr. Narasimaiah, property belonging to Smt. Leelamma and 15 ft passage leading to road **South :** Property belonging to Vendors	BJR Shiva Shankaran	Rajesh V R & Nagavalli	BSK-1-05840-2018-19, 08-08-2018	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment.

3	**ITEM NO: 0**All that piece and parcel of the residential immovable property bearing Site No. 6, Old Khatha No. 306, New BBMP Khatha No. 433/403/304/6 & 7, formed in Converted Sy.No. 60/6 and 60/11 (duly converted for non-agricultural residential/Industrial purposes, as per Official Memorandum bearing No. ALN.SR.32/78-79, dated: 21-08-1979, issued by the Tahasildar, Bengaluru South Taluk), situated at Bommanahalli Village, Begur Hobli, Bengaluru South Taluk, now comes within the limits of Bruhat Bengaluru Mahanagara Palike, Ward No.175, Bengaluru and measuring East to West : 40-0 feet, North to South on Eastern side: 80-0 feet, on Western Side: 78-0 feet, totaly measuring 3160 Square feet and bounded on : **East :** Site No. 7 **West :** Site No. 5 **North :** Private Property **South :** 30 feet Wide road **ITEM NO: 02** All that piece and parcel of the residential immovable property bearing Site No. 7, Old Khatha No. 306, New BBMP Khatha No. 433/403/304/6 & 7, formed in Converted Sy.No. 60/6 and 60/11 (duly converted for non-agricultural residential/Industrial purposes, as per Official Memorandum bearing No. ALN.SR.32/78-79, dated: 21-08-1979, issued by the Tahasildar, Bengaluru South Taluk), situated at Bommanahalli Village, Begur Hobli, Bengaluru South Taluk, now comes within the limits of Bruhat Bengaluru Mahanagara Palike, Ward No.175, Bengaluru and measuring East to West : 40-0 feet, North to South on Eastern side: 83-0 feet, on Western Side: 80-0 feet, totaly measuring 3260 Square feet and bounded on : **East :** Site No. 8 **West :** Site No. 6 **North :** Private Property **South :** 30 feet Wide road ***Including 24 Flats constructed in the above mentioned properties, details as follows;** **Ground Floor : Flat No's : 101, 102, 103, 104, 105** **1st Floor: Flat No's : 201, 202, 203, 204, 205** **2nd Floor: Flat No's : 301, 302, 303, 304, 305** **3rd Floor: Flat No's : 401, 402, 403, 404, 405** **4th Floor: Flat No's : 501, 502, 503, 504**	K V Sathyaprakash	Rajesh V R & Nagavalli	JPN-1-08328-2016-17, 10-02-2017	Will be obtained from the authorized valuer at the time of valuation.	Property is in the name of Nagavalli B.S., President and Rajesh V R, CEO of the said Financial stablishment

ಸಂಖ್ಯೆ:ಇ ಕಂಇ 09 ಜಿಆರ್‌ಸಿ 2026

(ಅನ್ವರ್‌ಬಾಷ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ಸೇವೆಗಳು-1, ಭೂಮಾಪನ ಮತ್ತು ವಿಶೇಷ ಕೋಶ)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಅನುಬಂಧ-2

Details of Vehicle in the name of Siri Vaibhava Gold Palace and V.R Rajesh, CEO of Sirivaibhava Pattina Sahakara Niyamitha.

Sl.No	Registration number	Vehicle model	Type of Vehicle	Date of registration	Name of the owner	Chassis Number	Engine Number	Remarks
1	KA-05-NB-5468	KIACARNIVAL D2.28AT PRESTIGE 7	7 seater	01-01-2021	Sirivaibhava Gold Palace	MZBMC81AMLN000522	D4HBKH671944	Vehicle is in the name of Financial Establishment
2	KA-05-MM-8272	TOYOTA INNOVA 2.5 V (E4) BS4	8 seater	23-03-2013	V R Rajesh	MBJ11JV40073992760313	2KDU263295	Vehicle is in the name of CEO of the Financial Establishment

ಸಂಖ್ಯೆ:ಇ ಕಂಇ 09 ಜಿಆರ್‌ಸಿ 2026

(ಅನ್ವರ್‌ಬಾಷ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ಸೇವೆಗಳು-1, ಭೂಮಾಪನ ಮತ್ತು ವಿಶೇಷ ಕೋಶ)

PR-188

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH